ಬೇಗ ಶ್ರೀಮಂತರಾಗಬಹುದು. ನಮ್ಮ ಕನಸುಗಳನ್ನು ನನಸಾಗಿಸಬಹುದು' ಎಂದು ಒತ್ತಾಯಿಸತೊಡಗಿದಳು. ಆದರೆ ಅಲ್ಲಿ ಕೆಲಸಕ್ಕೆ ನಾನೊಬ್ಬನೇ ಹೋಗಬೇಕಿತ್ತು. ಅಲ್ಲಿನ ನಿಯಮಗಳ ಪ್ರಕಾರ ಕಡಿಮೆ ಸಂಬಳವಿದ್ದವರಿಗೆ ಫ್ಯಾಮಿಲಿ ವೀಸಾ ಸಿಗುತ್ತಿರಲಿಲ್ಲ. ಹೀಗಾಗಿ ನಾನು ಇಲ್ಲಿಗೆ ಬರಲು ಮೊದಮೊದಲು ಹಿಂದೇಟು ಹಾಕಿದೆ. ಏಕೆಂದರೆ ನಾನು ಮದುವೆಯಾಗಿ ಆರು ವರ್ಷಗಳಾಗಿದ್ದವು. ನಾನು ಮೊದಲಿನಿಂದಲೂ ಪ್ರೀತಿಯಿಂದ ವಂಚಿತನಾಗಿದ್ದು, ಈಗಲಾದರೂ ಹೆಂಡತಿ, ಮಗಳೊಂದಿಗೆ ಬರುವ ಸಂಬಳದಲ್ಲೇ ನೆಮ್ಮದಿಯಿಂದ ಇರಬೇಕು ಎಂದು ಯೋಚನೆ ಮಾಡಿದ್ದೆ. ಆದರೆ ಅವಳ ಒತ್ತಾಯದಿಂದ ಕೊನೆಗೆ ನಾನು ಒಲ್ಲದ ಮನಸ್ಸಿನಿಂದಲೇ ಇಲ್ಲಿಗೆ ಕೆಲಸಕ್ಕೆ ಬಂದೆ. ಆಗಿನಿಂದಲೂ ನಾನು ಇಲ್ಲಿ ಬಹಳ ಕಷ್ಟಪಟ್ಟು ಕೆಲಸ ಮಾಡಿ, ನನಗೆ ಬೇಕಾದ ಕನಿಷ್ಠ ಊಟಕ್ಕೆ ಹಣ ಉಳಿಸಿಕೊಂಡು ಮಿಕ್ಕ ಹಣವನ್ನೆಲ್ಲಾ ಹೆಂಡತಿಗೆ ಕಳಿಸುತ್ತಿದ್ದೆ. ಇಲ್ಲಿ ನಾನು ಹೊಟ್ಟೆಬಟ್ಟೆ ಕಟ್ಟಿ ಉಳಿಸಿದ ಹಣದಿಂದ ಅಲ್ಲಿ ನಿಧಾನವಾಗಿ ಸೈಟ್, ಪುಟ್ಟ ಮನೆ ಎಲ್ಲಾ ಆಯಿತು. ನಾನು ಊರಿಗೆ ಎರಡು ವರ್ಷಕ್ಕೊಮ್ಮೆ ಹೋಗುತ್ತಿದ್ದೆ. ಪದೇ ಪದೇ ಹೋದರೆ ವಿಮಾನ ಪ್ರಯಾಣಕ್ಕೆ ಹಣ ಖರ್ಚಾಗುತ್ತದೆ, ಅದೇ ಹಣವನ್ನು ಊರಿಗೆ ಕಳಿಸಿದರೆ ಹೆಂಡತಿ ಮಗಳಿಗೆ ಕಷ್ಟಕ್ಕಾಗುತ್ತದೆ ಎಂದು ನಾನು ಎಣಿಸಿ ಹಣ ಕಳಿಸುತ್ತಿದ್ದೆ. ಆದರೆ ನನ್ನ ತ್ಯಾಗವನ್ನು ಅವಳು ಅರ್ಥ ಮಾಡಿಕೊಳ್ಳಲಿಲ್ಲ. ಬಹಳ ಕಾಲ ದೂರ ಇದ್ದರೆ ಪ್ರೀತಿ ಕಡಿಮೆಯಾಗುತ್ತಂತೆ. ಹಾಗೆಯೇ ನಾನು ಯಾರಿಗಾಗಿ ದೂರದ ದೇಶದಲ್ಲಿ ಹಗಲು ರಾತ್ರಿ ದುಡಿಯುತ್ತಿದ್ದೆನೋ ಅವರಿಗೇ ನನ್ನ ತ್ಯಾಗ, ಪ್ರೀತಿ ಅರ್ಥವಾಗಲಿಲ್ಲ. ನನಗೆ ಇತ್ತೀಚಿಗೆ ತಿಳಿದುಬಂದ ವಿಷಯವೇನೆಂದರೆ ಮೊದಲಿನಿಂದಲೂ ನನ್ನ ಹೆಂಡತಿಗೆ ಯಾರೋ ಗೆಳೆಯನಿದ್ದಾನಂತೆ. ಇಬ್ಬರೂ ಯಾವುದೇ ಹೆದರಿಕೆಯಿಲ್ಲದೇ ಈಗ ರಾಜಾರೋಷವಾಗಿ ಓಡಾಡುತ್ತಿದ್ದಾರಂತೆ ಎಂಬ ವಿಷಯ ಕೇಳಿ ನಾನು ಕುಸಿದುಹೋದೆ' ಎಂದ ನಾರಾಯಣ ಕಣ್ಣೀರು ತಂದುಕೊಂಡು ತನ್ನ ಕಥೆ ನಿಲ್ಲಿಸಿದ. 'ನೀನು ಈ ವಿಷಯ ನಿನ್ನ ಹೆಂಡತಿಯ ಹತ್ತಿರ ಕೇಳಲಿಲ್ವಾ?' ಎಂದ ಕುಮಾರನಿಗೆ, 'ಕೇಳಿದೆ ಸರ್. ಅದಕ್ಕೆ ಅವಳು ಹೇಳಿದ್ದು ನೀವಂತೂ ಹತ್ತಿರ ಇಲ್ಲಾ. ನಮ್ಮ ಕಷ್ಟಗಳಿಗೆ ಆಗೋದಿಲ್ಲ. ಆತ ನಮ್ಮ ಸಂಬಂಧಿಕ. ಮನೆಯ ನೂರಾರು ಕೆಲಸಗಳಿರುತ್ತವೆ. ಹಾಗಾಗಿ ಆತನ ಜೊತೆ ಓಡಾಡಿದರೆ ನಿನಗೇಕೆ ಎಲ್ಲರಂತೆ ಅನುಮಾನ ಎಂದು ನನ್ನ ಮೇಲೆಯೇ ಕಿಡಿಕಾರತೊಡಗಿದಳು. ನಾನು ಮಗಳನ್ನು ಪ್ರಾಣಕ್ಕಿಂತ ಹೆಚ್ಚು ಇಷ್ಟಪಡುತ್ತೇನೆ. ಆದರೆ ಅವಳೂ ಇತ್ತೀಚಿಗೆ ನನಗಿಂತ ಅವರಿಬ್ಬರನ್ನೇ ಜಾಸ್ತಿ ಹಚ್ಚಿಕೊಂಡಿದ್ದಾಳೆ. ನಾನು ಯಾರಿಗಾಗಿ ಇಲ್ಲಿ ದುಡಿಯುತ್ತಿದ್ದೀನೋ ಅವರಿಗೇ ನನ್ನ ಪ್ರೀತಿ, ದುಡಿಮೆ, ತ್ಯಾಗ ಅರ್ಥವಾಗುತ್ತಿಲ್ಲ. ನಾನು ಯಾರಿಗಾಗಿ ದುಡಿಯಬೇಕು? ಕೆಲವೊಮ್ಮೆ ಜೀವನ ಸಾಕು ಎನಿಸುತ್ತೆ ಸರ್. ಆದರೆ ಮಗಳ ಮದುವೆಯನ್ನು ಮಾಡಿ ಮುಗಿಸಿದರೆ ನನ್ನ ಜವಾಬ್ದಾರಿ ಮುಗಿಯುತ್ತದೆ. ಮಗಳ ಮದುವೆಯನ್ನು ಕಣ್ಣಲ್ಲಿ ನೋಡುವುದಕ್ಕಾಗಿ ಹಲ್ಲುಕಚ್ಚಿಕೊಂಡು ಇಲ್ಲಿಯೇ ಕೆಲಸ ಮಾಡುತ್ತಿದ್ದೇನೆ' ಎಂದ ನಾರಾಯಣ.

'ಹೌದು ನೀನು ಯಾವುದೋ ಕಂಪನಿಯಲ್ಲಿ ಆಫೀಸ್ ಬಾಯ್ ಆಗಿದ್ದವನು ಹೀಗೇಕೆ ರದ್ದಿ ಆಯುತ್ತಿದ್ದೀಯಾ?' ಎಂದ ಕುಮಾರ. 'ಅದನ್ನೂ ಹೇಳುತ್ತೇನೆ ಸಾರ್. ನನ್ನ ಕಷ್ಟ ಇಷ್ಟಕ್ಕೇ ಮುಗಿಯಲಿಲ್ಲ. ಆಫೀಸ್ ಬಾಯ್ ಆಗಿ ಮತ್ತು ಸಂಜೆ ಕೆಲವರ ಕಾರ್ ವಾಶ್ ಮಾಡುತ್ತಾ ಹಣ ಸಂಪಾದನೆ ಮಾಡುತ್ತಿದ್ದೆ. ನನಗೆ ಸ್ವಲ್ಪ ಉಳಿಸಿಕೊಂಡು ಮಿಕ್ಕ ಹಣವನ್ನೆಲ್ಲಾ ಊರಿಗೆ ಕಳುಹಿಸುತ್ತಿದ್ದೆ. ಎರಡು ವರ್ಷಕ್ಕೊಮ್ಮೆ ಮಾತ್ರ ಊರಿಗೆ ಹೋಗುತ್ತಿದ್ದೆ. ಹೀಗೆ ಇಪ್ಪತ್ತು ವರ್ಷ ಗಾಣದೆತ್ತಿನಂತೆ ದುಡಿದೆ. ಅದೇ ಸಮಯದಲ್ಲಿ ಇಲ್ಲಿ ಕೋವಿಡ್ ಅಪ್ಪಳಿಸಿ ನಮ್ಮ ಕಂಪನಿ ಸಂಪೂರ್ಣವಾಗಿ ದಿವಾಳಿಯಾಯಿತು. ಒಂದು ದಿನ ಎಲ್ಲರನ್ನೂ ಕೆಲಸ ಬಿಟ್ಟು ಹೋಗುವಂತೆ ಹೇಳಿದರು. ನನಗೆ ಕಂಪನಿಯ ಕಡೆಯಿಂದ ಯಾವ ಹಣವೂ ಸಿಗಲಿಲ್ಲ. ಬೇರೆ ವಿಧಿಯಿಲ್ಲದೆ ಅವರಿವರ ಕಾರ್ ವಾಶ್ ಮಾಡುತ್ತಾ, ಹೀಗೆ ಕಸದ ತೊಟ್ಟಿಯಿಂದ ರದ್ದಿ ಆಯುತ್ತಾ ಹಣ ಸಂಪಾದನೆ ಮಾಡುತ್ತಿದ್ದೇನೆ ಸರ್. ನನ್ನ ವೀಸಾ ಕೂಡ ಮುಗಿದು ಹೋಗಿ ವರ್ಷದ ಮೇಲಾಯಿತು. ಹೊಸದಾಗಿ ಕೆಲಸವೂ ಇಲ್ಲ, ವೀಸಾವೂ ಸಿಗುತ್ತಿಲ್ಲ. ಹಾಗಾಗಿ ಈ ಕೆಲಸಗಳಿಂದ ಹಣ ಸಂಪಾದನೆ ಮಾಡುತ್ತಿದ್ದೇನೆ. ಪೊಲೀಸರಿಗೆ ಸಿಕ್ಕರೆ ಜೈಲಿಗೆ ಹೋಗಬೇಕಾಗುತ್ತೆ. ಆದರೆ ಹೇಗೋ ಬದುಕುತ್ತಿದ್ದೇನೆ. ನನ್ನ ಮಗಳ ಓದು ಮುಗಿದಿದೆ. ಈ